ಎಲ್ಲವೂ ಸರಿಯಾಗುತ್ತದೆ...'' ಅವನು ಅವಳಿಗೆ ಧೈರ್ಯ ತುಂಬುತ್ತಾ ಹೇಳಿದ.

''ಆರು ವಾರಗಳ ಮಗು ದಿನಗಳು ಕಳೆದಂತೆ ಕೃಶವಾಗುತ್ತಿರುವುದು ಸಹಜವೆಂದು ನನಗನ್ನಿಸುತ್ತಿಲ್ಲ ಆಲ್ಬರ್ಟ್. ಏನೋ ದೋಷವಿದೆ. ಅವಳ ಕೈಕಾಲು ನೋಡು? ಸೊರಗಿ ಕಡ್ಡಿಗಳಂತಾಗಿವೆ.'' ಮಗು ಕಿಂಚಿತ್ತೂ ಅಲುಗಾಡಿದಂತೆ ಕಾಣಿಸುತ್ತಿರಲಿಲ್ಲ.

''ಗಾಬರಿಯಾಗುವಂತದ್ದು ಏನಿಲ್ಲವೆಂದು ಡಾಕ್ಟರ್ ರಾಬಿ ಹೇಳಿದ್ದರಲ್ಲಾ ಮೇಬಲ್? ಅಲ್ಲದೆ, ಆ ಮತ್ತೊಬ್ಬ ಡಾಕ್ಟರ್... ಏನವನ ಹೆಸರು?... ಅವನೂ ಅದನ್ನೇ ಹೇಳಿದ್ದನಲ್ಲವೇ?''

''ಹೌದು... ಹೌದು. ಅವರೆಲ್ಲಾ ಹೇಳಿದರು, ನಾನು ನಿಶ್ಚಿಂತೆಯಾಗಿಬಿಟ್ಟೆ! **I just hate them all!**' ಎನ್ನುತ್ತಾ ಮೇಬಲ್ ಕೋಪದಿಂದ ಭುಸುಗುಡುತ್ತಾ ಎದ್ದು ಮಹಡಿ ಹತ್ತಿ ಬೆಡ್‌ರೂಮಿಗೆ ಹೋದಳು.

ಆಲ್ಬರ್ಟ್ ಕುಳಿತಲ್ಲಿಯೇ ಕೊರಡಾಗಿ ಬಿಟ್ಟಿದ್ದ.

ಸ್ವಲ್ಪ ಹೊತ್ತಿನಲ್ಲೇ ಅವನಿಗೆ ಮೇಲಣ ಬೆಡ್‌ರೂಮಿನಲ್ಲಿ ಮೇಬಲ್ ಮಗುವನ್ನೆತ್ತಿಕೊಂಡು ನಡೆದಾಡುವ ಶಬ್ದ ಕೇಳಿಸಿತು. ಅದು ನಿಲ್ಲುತ್ತಿದ್ದಂತೆ ಅವನೂ ಎದ್ದು ಮಹಡಿ ಹತ್ತುವುದು ದಿನಚರಿಯಂತಾಗಿತ್ತು. ಮೇಬಲ್ ಮಗುವನ್ನೇ ದಿಟ್ಟಿಸಿ ಮಂಚದ ಅಂಚಿನಲ್ಲಿ ಕೂತಿರುತ್ತಿದ್ದಳು. ಅವಳ ಕಣ್ಣುಗಳು ತೇವಗೊಂಡಿರುತ್ತಿದ್ದವು.

''ಅವಳು ಹಸಿದಿದ್ದಾಳೆ ಆಲ್ಬರ್ಟ್.'' ಅವನನ್ನು ಕಂಡೊಡನೇ ಅವಳು ದುಃಖದಿಂದ ಹೇಳುತ್ತಿದ್ದಳು.

ಹಿಂದಿನ ವಾರವೇ ಅವರು ಮಗುವನ್ನು ಆಸ್ಪತ್ರೆಗೆ ಕೊಂಡೊಯ್ದಿದ್ದರು. ಮಗು ಆರೋಗ್ಯವಾಗಿದೆ ಎಂದು ಡಾಕ್ಟರು ಸರ್ಟಿಫಿಕೆಟ್ ಕೊಟ್ಟಿದ್ದರು.

''ಡಾಕ್ಟ್ರೇ, ನನಗೆ ಒಂಬತ್ತು ದೀರ್ಘ ವರ್ಷಗಳ ಬಳಿಕ ಮಗು ಆಗಿರೋದು. ಅದಕ್ಕೇನಾದ್ರೂ ಆದ್ರೆ ನಾನು ನಿಮಗೆ ಖಂಡಿತಾ ಕ್ಷಮಿಸೋದಿಲ್ಲ!'' ಅವಳು ಉದ್ವೇಗದಿಂದ ಹೇಳಿದ್ದಳು. ಅದು ಐದು ದಿನಗಳ ಹಿಂದೆ. ಆ ದಿನದಿಂದ ಮಗುವಿನ ತೂಕ ಕಡಿಮೆಯಾಗುತ್ತಲೇ ಇತ್ತು. ಯಾರು ಏನು ತಾನೆ ಮಾಡಬಲ್ಲರು? ಡಾಕ್ಟರುಗಳು ಹೇಳುವುದನ್ನು ನಂಬಲೇ ಬೇಕು. ಆಲ್ಬರ್ಟ್ ಮತ್ತೊಮ್ಮೆ ನಿಯತಕಾಲಿಕ ಎತ್ತಿಕೊಂಡ.

ಅವನು ಓದುತ್ತಿದ್ದ ನಿಯತಕಾಲಿಕ ಜೇನುನೊಣ ಸಾಕಣೆಯ ಕುರಿತಾಗಿತ್ತು. ಜೇನು ಕೃಷಿ ಅವನ ನೆಚ್ಚಿನ ಹವ್ಯಾಸವಾಗಿತ್ತು. ಬಾಲ್ಯದಿಂದಲೂ ಅವನು ಜೇನುನೊಣಗಳ ಸಹವಾಸ ಮಾಡಿಕೊಂಡಿದ್ದ. ಜೇನ್ನೊಣ ಕಂಡಿದ್ದೆ ಹಿಡಿದು ತಾಯಿಯ ಬಳಿ ಓಡುತ್ತಿದ್ದ. ತನ್ನ ಎಳೆ ಕೆನ್ನೆಗಳ ಮೇಲೆ ಬಿಡಿಸಿಕೊಳ್ಳುತ್ತಿದ್ದ. ಅವು ಮಕರಂದ ಹೀರುವುದನ್ನು ಮರೆತು ಅವನ ಕೆನ್ನೆಗಳ ಮೇಲೆ ಆಟ ಆಡುತ್ತಿದ್ದವು. ಏನೂ ತೊಂದರೆ ಕೊಡುತ್ತಿರಲಿಲ್ಲ! ಕೊನೆಗೆ ಸಾಕಾಗಿ ಅವನೇ ಅವುಗಳನ್ನು ಹೂಗಳ ಮೇಲೆ ಬಿಟ್ಟು ಬರುತ್ತಿದ್ದ. ಆದರೂ ಅವು ಮತ್ತೆ ಬಂದು ಅವನ ಮೇಲೆಲ್ಲಾ ಓಡಾಡಿಕೊಂಡಿರುತ್ತಿದ್ದವು!

ಅವನ ತಂದೆ ಗಾರೆ ಕೆಲಸ ಮಾಡುತ್ತಿದ್ದ. ಚಿಕ್ಕಂದಿನಿಂದಲೇ ತನ್ನ ಮಗನ ಬಳಿ ನೊಣ ಕೀಟಗಳು ಹೆಚ್ಚೆಚ್ಚಾಗಿ ಒಡನಾಡುತ್ತಿರುವುದನ್ನು ನೋಡಿ ಮುಂದೆ ಏನೋ ಅನಿಷ್ಟ ಕಾದಿದೆ ಎಂದು ದೃಢವಾಗಿ ನಂಬಿದ್ದ. ಆದರೆ, ಅವನ ಧರ್ಮಭೀರು ತಾಯಿ ಮಾತ್ರ ತನ್ನ ಮಗ ಅಸ್ಸಿಸಿಯ ಸಂತ ಫ್ರಾನ್ಸಿಸನ ಪ್ರತಿರೂಪವೆಂದೇ ಬಗೆದಿದ್ದಳು. (ಇಟಲಿ ದೇಶದ ಅಸ್ಸಿಸಿ ನಗರದ ಕ್ರೈಸ್ತ ಸಂತ ಫ್ರಾನ್ಸಿಸ್ 'ಪಶುಪ್ರಾಣಿಗಳ ಸಂತ'ನೆಂದೇ ಪ್ರಸಿದ್ಧನಾಗಿದ್ದಾನೆ. ಮನುಷ್ಯರಂತೆ ಪ್ರಾಣಿಗಳಿಗೂ ಈ ಭೂಮಿಯ ಮೇಲೆ ಹಕ್ಕಿದೆ ಎಂದು ಭಾವಿಸಿದವನು. ಪಶುಪಕ್ಷಿಗಳೊಂದಿಗೆ ಸಂವಾದಿಸುತ್ತಿದ್ದ ಎಂದೂ ಹೇಳುತ್ತಾರೆ).